

# ಅಲ್ಲಿರುವ ಬುದ್ಧರ ಸಂಖ್ಯೆ 1.25 ಲಕ್ಷ!

■ ರಾಜು ಎಲ್.ಎಸ್.

**ಭೂತಾನ್‌ನ ಥಿಂಪುವಿನಲ್ಲಿ ಜನಸಂಖ್ಯೆಗಿಂತ ಬುದ್ಧ ಮೂರ್ತಿಗಳ ಸಂಖ್ಯೆಯೇ ಹೆಚ್ಚು**

ಭೂತಾನ್‌ನ ರಾಜಧಾನಿ ಥಿಂಪು. ಅಲ್ಲಿಯ ಜನಸಂಖ್ಯೆ ಸುಮಾರು ಒಂದು ಲಕ್ಷದ ಆಸುಪಾಸು. ಆದರೆ, ಆ ನಗರದಲ್ಲಿರುವ ಬುದ್ಧ ಮೂರ್ತಿಗಳ ಸಂಖ್ಯೆ ಒಂದು ಲಕ್ಷ ಇಪ್ಪತ್ತೈದು ಸಾವಿರ! ಬೌದ್ಧ ಧರ್ಮದ ಸೆಲೆಯಾಗಿ ಹಾಗೂ ಬುದ್ಧ ಮೂರ್ತಿಗಳ ನೆಲೆಯಾಗಿ ಥಿಂಪು ವಿಶ್ವ ಪ್ರವಾಸಿ ನಕಾಶೆಯಲ್ಲಿ ಪ್ರಸಿದ್ಧ.

ಪ್ರಪಂಚದಲ್ಲಿ ಶೇ. 72ರಷ್ಟು ನೈಸರ್ಗಿಕ ಪ್ರದೇಶವನ್ನು ಹೊಂದಿರುವ ಏಕೈಕ ರಾಷ್ಟ್ರ ಭೂತಾನ್. ನಿಸರ್ಗದ ನಡುವೆ ಚಿತ್ರಿಸಿದ ವರ್ಣಮಯ ಚಿತ್ತಾರಗಳಂತೆ ಭೂತಾನ್‌ನಲ್ಲಿ ವಸತಿಪ್ರದೇಶಗಳು ಕಾಣಿಸುತ್ತವೆ. ಅಲ್ಲಿನ ಹವಾಮಾನವೇ ನಿಸರ್ಗದ ಆರೋಗ್ಯವನ್ನು ಸೂಚಿಸುವಂತಿದೆ. ಬೇಸಿಗೆಯಲ್ಲಿ ಗರಿಷ್ಠ 21 ರಿಂದ 23 ಡಿಗ್ರಿ ಸೆಲ್ಸಿಯಸ್ ತಾಪಮಾನವಿದ್ದರೆ, ಚಳಿಗಾಲದಲ್ಲಿ 5ರಿಂದ 5ರಷ್ಟು ಉಷ್ಣಾಂಶವಿರುವ ತಂಪಾದ ರಾಷ್ಟ್ರವದು. ಟಿಬೆಟ್ ಮತ್ತು ಭಾರತ ದೇಶದ ಮಧ್ಯದಲ್ಲಿರುವ ಪುಟ್ಟ ರಾಷ್ಟ್ರವಾದ ಭೂತಾನ್‌ನಲ್ಲಿ ಬೌದ್ಧ ಧರ್ಮವೇ ಪ್ರಧಾನ ಧರ್ಮ.

ಭೂತಾನ್ ಪ್ರವಾಸದಲ್ಲಿ ನಾವು ಥಿಂಪುವಿಗೆ ಭೇಟಿ ಕೊಟ್ಟಾಗ ಅಲ್ಲಿ ಮೈ ಕೊರೆಯುವ ಚಳಿ. ಮೈಯನ್ನು ಮರಗಟ್ಟಿಸುವ ಆ ಚಳಿಯೂ ಹಿತಕರ ಎನ್ನಿಸಿದ್ದು 169 ಅಡಿ ಎತ್ತರದ ಬುದ್ಧ ಮೂರ್ತಿಯ ಸನ್ನಿಧಿಯಲ್ಲಿ ನಿಂತಾಗ. ಡೋರ್ಡೆನ್ಮಾ ಹೆಸರಿನ ಆ ಬೌದ್ಧಾಲಯ ಪರ್ವತ ಶ್ರೇಣಿಗಳ ಮಧ್ಯೆ ಕಂಗೊಳಿಸುತ್ತಿದೆ. ಮನುಕುಲದ ಶಾಂತಿದೂತನಾದ ಬುದ್ಧನ ಪ್ರತಿಮೆ ನೋಡುಗರನ್ನು ಸಮ್ಮೋಹನಗೊಳಿಸುವಂತಿದೆ. ಆ ಪ್ರತಿಮೆ ವಿಶ್ವದಲ್ಲಿನ ಅತಿ ಎತ್ತರದ ಬುದ್ಧನ ಪ್ರತಿಮೆಗಳಲ್ಲೊಂದು. ಕಂಚಿನ ಲೋಹಕ್ಕೆ ಚಿನ್ನದ ಲೇಪನ ಮಾಡಿ ಆ ಪ್ರತಿಮೆಯನ್ನು ನಿರ್ಮಿಸಿದ್ದಾರೆ. ಥಿಂಪುವಿನ ಬೆಟ್ಟದ ಮೇಲಿನ ಬೃಹತ್ ಬುದ್ಧ ಚಿನ್ನದ ಬುದ್ಧ ಧ್ಯಾನ ಸಭಾಂಗಣದ ಮೇಲೆ ಕುಳಿತಿದ್ದಾನೆ.

